# IN THE COURT OF THE ADDL. SENIOR CIVIL JUDGE & JMFC., GUBBI

# **OS - 116/2023**

Witness present and duly sworn on : 04-08-2026

Cross Examination: by Counsel for Plaintiffs :

ನಾನು ಅಡಿಕೆ ವ್ಯಾಪಾರ ಮಾಡುತ್ತೇನೆ. ನಾನು 10 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿದ್ದೇನೆ. ನನ್ನ ಜನನ ದಿನಾಂಕ 22-01-1995 . ನಾನು ನನ್ನ ಕುಟುಂಬ ಮತ್ತು 2 ರಿಂದ 6 ನೇ ಪ್ರತಿವಾದಿಗಳ ಪರವಾಗಿ ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿ . ಈ ದಾವೆ ನಡೆಸಲು ಮತ್ತು ಗಂಗಮ್ಮ ರವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ನೀಡಿದ್ದಾರೆ ಎಂದರೆ ಸರಿ . ಗಂಗಮ್ಮ ಮತ್ತು 1 ನೇ ವಾದಿ ರುಕ್ಕಮ್ಮ ರವರ ನಡುವೆ ಈ ಮೊದಲು ನಡೆದಿರುವ ಪ್ರಕರಣಗಳ ಮಾಹಿತಿ ನನಗೆ ಇದೆ ಎಂದರೆ ಸರಿ . ಗಂಗಮ್ಮ ರವರು ಈ ದಾವೆಯ 1 ನೇ ಪ್ರತಿವಾದಿ ರುಕ್ಕಮ್ಮ ರವರ ವಿರುದ್ದ ಅಸಲು ದಾವೆ ನಂ 154/1996 ಸಲ್ಲಿಸಿದ್ದರು ಎಂದರೆ ಸರಿ . ಸದರಿ ದಾವೆಯನ್ನು ಗಂಗಮ್ಮ ರವರು ಸದರಿ ದಾವೆಯಲ್ಲಿ ಇರುವ ಆಸ್ತಿಗಳ ಮಾಲೀಕರು ಎಂದು ಘೋಷಿಸಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವಯ ಐಟಂ ನಂ 1 ಮತ್ತು 2 ಆಸ್ತಿಗಳು ಸದರಿ ಓ ಎಸ್ 154/1996 ದಾವೆಯಲ್ಲಿ ಐಟಂ ನಂ 1 ಮತ್ತು 2 ಆಸ್ತಿಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ.ಓ ಎಸ್ 154/1996 ದಾವೆಯಲ್ಲಿ ಗುಬ್ಬಿಯ ಸರ್ವೆ ನಂ 43 ರ 3 ಎಕರೆ 8 ಗುಂಟೆ ಪೈಕಿ 1 ಎಕರೆ 2 ಗುಂಟೆ ಆಸ್ತಿಯನ್ನು ದಾವಾ ಐಟಂ ನಂ 3 ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 154/1996 ದಾವೆಯಲ್ಲಿ ಗುಬ್ಬಿಯ ಖಾತಾ ನಂ 572/407 ಆಸ್ತಿಯನ್ನು ಸೇರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 154/1996 ದಾವೆಯಲ್ಲಿ ರುಕ್ಕಮ್ಮ ರವರು ಲಿಖಿತ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ನಂತರ ಗಂಗಮ್ಮ ರವರು ದಾವೆಯನ್ನು ನಡೆಸದೇ ಇದ್ದ ಕಾರಣ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಯಾರು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 154/1996 ದಾವೆಯಲ್ಲಿ ಐಟಂ ನಂ 4 ರ ಸರ್ವೆ ನಂ 43 ಆಸ್ತಿಯನ್ನು ಈ ದಾವೆಯ ವಾದಿ ಮಂಜುಳ ಮತ್ತು 1 ನೇ ಪ್ರತಿವಾದಿ ರುಕ್ಕಮ್ಮ ರವರು ಮಾರಾಟ ಮಾಡಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ಓ ಎಸ್ 154/1996 ದಾವೆಯಲ್ಲಿ ಐಟಂ ನಂ 4 ಆಸ್ತಿಯು ಈ ದಾವೆಯ ವಾದಿ ಮಂಜುಳ ರವರಿಗೆ ಮರಣ ಶಾಸನದ ಮೂಲಕ ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

ಚೆನ್ನಮ್ಮ ಕೋಂ ಎಲಕ್ಕಪ್ಪ ರವರು ನನ್ನ ಅಜ್ಜಿ . ಸದರಿ ಚೆನ್ನಮ್ಮ ರವರ ಮಗಳು ಮೇಲೆ ಹೇಳಿರುವ ಗಂಗಮ್ಮ ಎಂದರೆ ಸರಿ . ಸದರಿ ಗಂಗಮ್ಮ ರವರ ತಮ್ಮ ನನ್ನ ತಂದೆ ಎನ್ ವೈ ಜಯಣ್ಣ ಎಂದರೆ ಸರಿ . ಗುಬ್ಬಿ ಟೌನ್ ಸರ್ವೆ ನಂ 43 ಜಮೀನನ್ನು ಮಾರಾಟ ಮಾಡಿರುವುದನ್ನು ಗಂಗಮ್ಮ ರವರು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆನ್ನಮ್ಮ ರವರು ಈ ದಾವೆಯ 1 ಮತ್ತು 6 ನೇ ಪ್ರತಿವಾದಿಗಳಾದ ರುಕ್ಕಮ್ಮ ಮತ್ತು ಗಂಗಮ್ಮ ರವರ ವಿರುದ್ದ ಓ ಎಸ್ 258/2002 ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗಳ ಮಾಹಿತಿ ಗಂಗಮ್ಮ ರವರು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2014 ರಲ್ಲಿ ಗಂಗಮ್ಮ ರವರ ಪರವಾಗಿ ಆದ ಡಿಕ್ರಿ ಮತ್ತು ಮೇಲ್ಮನವಿ ವಿಚಾರ ನನಗೆ ಗೊತ್ತಿರುತ್ತದೆ. ಓ ಎಸ್ 258/2002 ದಾವೆಯು ವಿಚಾರಣೆಯ ನಂತರ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಕುಟುಂಬ ಮತ್ತು ಗಂಗಮ್ಮ ರವರ ಕುಟುಂಬ ಬಹಣ ವರ್ಷಗಳ ಹಿಂದೆ ಒಟ್ಟಿಗೆ ಜೀವನ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಮ್ಮ ಮನೆ ಮತ್ತು ಗಂಗಮ್ಮ ರವರ ಮನೆ ಒಂದು ಎರಿಯಾದಲ್ಲಿ ಇದೆ ಎಂದರೆ ಸರಿ . ಈ ದಾವೆಯ 6 ನೇ ಪ್ರತಿವಾದಿ ಗಂಗಮ್ಮ ರವರು ಈ ದಾವೆಯ 1 ನೇ ಪ್ರತಿವಾದಿ ರುಕ್ಕಮ್ಮ ರವರ ವಿರುದ್ದ ಓ ಎಸ್ 3/2008 ದಾವೆ ಸಲ್ಲಿಸಿದ್ದರು ಎಂದರೆ ಸರಿ .ಸದರಿ ದಾವೆಯನ್ನು ಗುಬ್ಬಿ ಯ ಸರ್ವೆ ನಂ 43 ಆಸ್ತಿಗೆ ಸಲ್ಲಿಸಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ಈ ದಾವೆಯ 6 ನೇ ಪ್ರತಿವಾದಿ ಗಂಗಮ್ಮ ರವರು ಮೂಡಲಗಿರಿಯವರ ಹೆಂಡತಿ ಅಲ್ಲಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ಗಂಗಮ್ಮ ರವರು ಮೂಡಲಗಿರಿಯವರ ಹೆಂಡತಿ ಎಂದು ಸಾಬೀತು ಮಾಡದೇ ಇದ್ದ ಕಾರಣ ಅವರು ಸಲ್ಲಿಸಿದ್ದ ಓ ಎಸ್ 3/2008 ದಾವೆ ಯು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 3/2008 ದಾವೆಯ ಆೇಶವನ್ನು ಆರ್ ಎ ನಂ 73/2008 ರಲ್ಲಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.ಆ್ರ್ ಎ 73/2008 ರಲ್ಲಿ ಓ ಎಸ್ 3/2008 ದಾವೆಯ ಆದೇಶವನ್ನು ಎತ್ತು ಹಿಡಿದು ಮೇಲ್ಮನವಿ ವಜಾ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 3/2008 ದಾವೆ ಮತ್ತು ಆರ್ 73/2008 ಆದೇಶಗಳನ್ನು ಪ್ರಶ್ನಿಸಿ ಗಂಗಮ್ಮ ರವರು ಮಾನ್ಯ ಉಚ್ಚ

ನ್ಯಾಯಾಲಯದಲ್ಲಿ ಆರ್ ಎಸ್ ಎ ನಂ 1005/2014 ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ . ಸದರಿ ಮೇಲ್ಮನವಿಯು ದಿಃ20-02-2026 ರಂದು ವಜಾ ಆಗಿದೆ ಎಂದರೆ ಸರಿಯಲ್ಲ. ಆರ್ ಎ ನಂ 73/2008 ಮೇಲ್ಮನವಿಯು ದಿಃ12-04-2014 ರಂದು ವಜಾ ಆಗಿದೆ ಎಂದರೆ ಸರಿ . ಓ ಎಸ್ 3/2008, ಆರ್ ಎ ನಂ 73/2008 ಆದೇಶಗಳ ನಂತರ ಸದರಿ ಆದೇಶಗಳನು ಮರೆಮಾಚಿ ಈ ದಾವೆಯ 6 ನೇ ಪ್ರತಿವಾದಿ ಗಂಗಮ್ಮ ರವರು ಓ ಎಸ್ 362/2014 ದಾವೆ ಸಲ್ಲಿಸಿದ್ದರು ಎಂದರೆ ಸರಿ .

(Further cross examination deferred at the request of counsel for the plaintiff )

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi